**ಬೃಹತ್ ಬೆಂಗಳೂರು ಮಹಾನಗರದ ಜನನಿಬಿಡ ಪ್ರದೇಶವಾದ ಆನಂದರಾವ್ ವೃತ್ತದ ಬಳಿ ಖಾಸಗಿ ಬಸ್ ನಿಲ್ದಾಣ ನಿರ್ಮಾಣ**

**877 (1130) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) :** ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಜನನಿಬಿಡ ಪ್ರದೇಶವಾದ ಆನಂದರಾವ್ ವೃತ್ತದ ಬಳಿ ವಿ.ಆರ್.ಎಲ್. ಮತ್ತು ಎಸ್.ಆರ್.ಎಸ್. ಟ್ರಾವೆಲ್ಸ್‌ಗಳು ಬಸ್ ನಿಲ್ದಾಣ ನಿರ್ಮಿಸಿರುವುರಿಂದ ವಾಹನ ದಟ್ಟಣೆ ಹೆಚ್ಚಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿಲ್ಲವೇ;

ಆ) ಈ ಜನನಿಬಿಡ ಪ್ರದೇಶದಲ್ಲಿ ಬಸ್ ನಿಲ್ದಾಣ ನಿರ್ಮಿಸಿಕೊಳ್ಳಲು ಸಾರಿಗೆ ಇಲಾಖೆ ಅನುಮತಿ ನೀಡಿದೆಯೆ;

ಇ) ಹಾಗಿದ್ದಲ್ಲಿ, ಯಾವ ಆಧಾರದ ಮೇಲೆ ಅನುಮತಿ ನೀಡಲಾಗಿದೆ, ವಿವರ ನೀಡುವುದು: ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು;

ಈ) ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನೇ ನಗರದ ಹೊರವಲಯಕ್ಕೆ ಸ್ಥಳಾಂತರಿಸುವಾಗ ಖಾಸಗಿ ಬಸ್ ನಿಲ್ದಾಣಕ್ಕೆ ಅನುಮತಿ ನೀಡಿರುವುದು ಕಾನೂನು ಬಾಹಿರವಲ್ಲವೇ?

**ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :**

ಅ) ವಿ.ಆರ್.ಎಲ್ ಮತ್ತು ಎಸ್.ಆರ್.ಎಸ್. ಟ್ರಾವೆಲ್ಸ್‌ಗಳ ಖಾಸಗಿ ಬಸ್ಸುಗಳನ್ನು ಅವರುಗಳ ಸ್ವಂತ ಸ್ಥಳದಲ್ಲಿ ನಿಲ್ಲಿಸಲು ಸ್ಥಳಾವಕಾಶ ಮಾಡಿಕೊಂಡಿರುವುದರಿಂದ ಸಾರ್ವಜನಿಕ ರಸ್ತೆಗಳಲ್ಲಿ ಈ ವಾಹನಗಳನ್ನು ನಿಲ್ಲಿಸದೇ ಇರುವುದರಿಂದ ಇತರೆ ವಾಹನಗಳಿಗೆ ತೊಂದರೆಯಾಗಿರುವುದಿಲ್ಲ. ಆದ ಕಾರಣ ವಾಹನ ದಟ್ಟಣೆ ಹೆಚ್ಚಾಗಿರುವುದಿಲ್ಲ.

ಆ) ಸಾರಿಗೆ ಇಲಾಖೆಯಿಂದ ಯಾವುದೇ ಅನುಮತಿ ನೀಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

**877 (1130) Sri Narendra Babbu, N.L. (Mahalakshmi Layout) :** Hon'ble Minister for Home and Transport,

a) Whether it has come to the notice of the Government that there is overcrowd of vehicles near Ananda Rao Circle, Bangalore's most congested area due to construction of Bus Stands by VRL & SRS Travels;

b) Whether the Transport Department has permitted to construct the Bus Stand in this overcrowded area;

c) If permitted, under what basis it is permitted, furnish the details. To control the Traffic, What measures are being taken;

d) When the KSRTC Bus Stand is being shifted to outskirts of city area, is it not amounting to violation of the law to permit the Private Bus Stand?

**Sri R. Ashoka (Minister of Home & Transport) :**

a) There is no overcrowd of vehicles near Ananda Rao Circle because VRL & SRS Travels are not parking their buses in public roads and they built their own Bus Stands.

b) Transport Department has not given any permission.

c) Not applicable.

d) Not applicable.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್–75 ಶಂಕರಮಠದಲ್ಲಿರುವ ಮಹಾತ್ಮಗಾಂಧಿ ನಗರ ಸ್ಲಂ ನಿವಾಸಿಗಳಿಗೆ ಹಕ್ಕು ಪತ್ರ ನೀಡುವುದು

**878 (1131) ಶ್ರೀ ನರೇಂದ್ರ ಬಾಬು ನೆ.ಲ (ಮಹಾಲಕ್ಷ್ಮೀ ಲೇಔಟ್) :** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್–75 (ಶಂಕರಮಠ) ದಲ್ಲಿರುವ ಮಹಾತ್ಮ ಗಾಂಧಿನಗರ ಸ್ಲಂನ 256 ಮನೆಯ ನಿವಾಸಿಗಳು ಕಳೆದ 40 ವರ್ಷಗಳಿಂದ ವಾಸಿಸುತ್ತಿದ್ದು ಅವರಿಗೆ ಇನ್ನೂ ಹಕ್ಕು ಪತ್ರ ನೀಡಿರುವುದಿಲ್ಲ ಏಕೆ;